ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

OS ನಂಬರ. 90/2023

ಪಿ ಡಬ್ಲ್ಯೂ- 2

ದಿಃ 18-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಪ್ರವೀಣ ನಾಯ್ಕ |
| ತಂದೆಯ ಹೆಸರುಃ | ವಿಷ್ಣು ನಾಯ್ಕ |
| ವಯಸ್ಸುಃ | 56 ವರ್ಷ |
| ಉದ್ಯೋಗಃ | Assistant executive engineer |
| ವಿಳಾಸಃ | ಅಂಬಾರಕೊಡ್ಲ, ಅಂಕೋಲಾ |

ಮುಖ್ಯ ವಿಚಾರಣೆ: ವಾದಿಯ ಪರ ವಕೀಲರಾದ ಶ್ರೀ ಹೆಚ್ ಎಸ್ ಎಸ್ ಇವರಿಂದಃ

ನಾನು 2002 ರಲ್ಲಿ ಆ್ಯಂಟಿ ತೆಪ್ಟ ಲಾ ಯೋಜನೆಯಡಿಯಲ್ಲಿ ಯಾರಾದರೂ ವಿದ್ಯುತ್ ಕನೆಕ್ಷನ್ ಕೇಳಿದರೆ ಕೊಡುವ ಪರವಾಣಿಗೆ ಇತ್ತು. ಅದರಂತೆ ದಿಃ08-04-2002 ರಲ್ಲಿ ವಾದಿಯು ಮೀಟರನ್ನು ವಾಣಿಜ್ಯ ಉದ್ದೇಶಕ್ಕಾಗಿ ನಮ್ಮಿಂದ ಪಡೆದುಕೊಂಡಿರುತ್ತಾರೆ. ಅಂಬಾರಕೊಡ್ಲ ರಸ್ತೆ, ಕಾಕರಮಠ, ಅಂಕೋಲಾದಲ್ಲಿರುವ ಅವರ ತರಕಾರಿ ಅಂಗಡಿಗೆ ಅಳವಡಿಸಿರುತ್ತೇನೆ. 2002 ರಿಂದ ಇಲ್ಲಿಯವರೆಗೂ ಸದರಿ ಮೀಟರ್ ಅವರ ಹೆಸರಿನಲ್ಲಿಯೇ ಇದ್ದು, ಅವರೇ ಬಿಲ್ಲನ್ನು ತುಂಬಿಕೊಂಡು ಬಂದಿದ್ದು, ಈಗ ಯೂವುದೇ ಬಾಕಿ ಇರುವುದಿಲ್ಲ. ಅದಕ್ಕೆ ಸಂಬಧಪಟ್ಟ ಎಲ್ಲ ದಾಖಲಾತಿಗಳನ್ನು ಇಂದು ನಾನು

ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ದಿಃ08-04-2002 ರಲ್ಲಿ ವಾದಿಯು ಭರಿಸಿದ ನೊಂದಣಿ ಶುಲ್ಕದ ರಶೀದಿಯ ದೃಢೀಕೃತ ಪ್ರತಿ ನಿಪಿ-30, ಪಾವತಿ ರಶೀದಿಯ ದೃಢೀಕೃತ ಪ್ರತಿಯನ್ನು ನಿಪಿ-30ಎ, ತನಿಖಾ ವರದಿಯ ದೃಢೀಕೃತ ಪ್ರತಿಯನ್ನು ನಿಪಿ-31, ಸ್ಯಾಂಕ್ಷನ್ ಲೋಡ್ ದೃಢೀಕೃತ ಪ್ರತಿ ನಿಪಿ-32, ಸಂಪರ್ಕದ ಒಪ್ಪಂದ ಪತ್ರದ ದೃಢೀಕೃತ ಪ್ರತಿ ನಿಪಿ-33, ಇಂಡೆಮ್ನಿಟಿ ಬಾಂಡಿನ ದೃಢೀಕೃತ ಪ್ರತಿ ನಿಪಿ-34, ಪ್ರಮಾಣ ಪತ್ರ ಹಾಗೂ ಸ್ವೀಕೃತಿ ದೃಢೀಕೃತ ಪ್ರತಿ ನಿಪಿ-35, ಒಪ್ಪಂದದ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ-36, ಸೇವಾ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ನಿಪಿ-37, ಇಲ್ಲಿಯವರೆಗೆ ಪಾವತಿ ಮಾಡಿದ ಬಿಲ್ಲಿನ ವಿವರಗಳ ದೃಢೀಕೃತ ಪ್ರತಿಗಳನ್ನು ನಿಪಿ-38 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ</u> ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

C/c. ಜೆ.ಎಂ.ಎಫ್.ಸಿ., ಅಂಕೋಲಾ.